ಸಂಯುಕ್ತ ಕರ್ನಾಟಕ
Thursday, December 24th, 2009

# ಕಿರುನಾಟಕಗಳ ರಾಷ್ಟ್ರೀಯ ಹಬ್ಬ: ತಂಡಗಳಿಗೆ ಆಹ್ವಾನ

ಬೆಂಗಳೂರು, ಡಿ. 23: ವಿವಿಧತೆಯಲ್ಲಿ ಏಕತೆ ಸಾರುವ ಉದ್ದೇಶದೊಂದಿಗೆ ನಗರದ ಜೈನ್ ವಿಶ್ವವಿದ್ಯಾಲಯದ ವ್ಯವಹಾರ ನಿರ್ವಹಣಾ ಅಧ್ಯಯನ ಕೇಂದ್ರವು 2010 ಫೆಬ್ರವರಿ 7ರಂದು 'ಕಿರು ನಾಟಕಗಳ ರಾಷ್ಟ್ರೀಯ ಹಬ್ಬ' ಆಯೋಜಿಸಿದೆ.

ಭಾರತದಾದ್ಯಂತ ಸ್ಪರ್ಧೆಗಾಗಿ ಕಿರುನಾಟಕಗಳ ತಂಡಗಳನ್ನು ಆಹ್ವಾನಿಸಿದೆ. 2010 ಫೆ. 1 ಮತ್ತು 2 ರಂದು (ಬೆಳಿಗ್ಗೆ 8 ರಿಂದ ರಾತ್ರಿ 8) ಮುಂಬೈ, ಬೆಂಗಳೂರು ಹಾಗೂ ಕೊಲ್ಕತಾಗಳಲ್ಲಿ ನಾಟಕಗಳ ಪ್ರಾಥಮಿಕ ಆಯ್ಕೆ ನಡೆಸುತ್ತಿದ್ದು, ಫೆ. 3, 4, ಹಾಗೂ 5 ರಂದು ಅಂತಿಮಪೂರ್ವ ಆಯ್ಕೆ ಹಾಗೂ ಫೆ. 7ರಂದು ಅಂತಿಮ ಆಯ್ಕೆಯು ಬೆಂಗಳೂರಿನ ಜೆ.ಎಸ್. ಎಸ್. ಸಭಾಂಗಣದಲ್ಲಿ ನಡೆಸಲಾಗುವುದು.

ಕನ್ನಡ, ಹಿಂದಿ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ ತಲಾ ಆರು ನಾಟಕಗಳನ್ನು ಪ್ರಾಥಮಿಕ ಹಂತದಲ್ಲಿ ಆಯ್ಕೆ ಮಾಡುತ್ತಿದ್ದು, ಅಂತಿಮಪೂರ್ವ ಆಯ್ಕೆಯಲ್ಲಿ ಪ್ರತಿ ಭಾಷೆಯ ಮೂರು ನಾಟಕಗಳ ಆಯ್ಕೆ ಇರುತ್ತದೆ. ಅಂತಿಮ ಆಯ್ಕೆಯಲ್ಲಿ ಪ್ರತಿ ಭಾಷೆಯ ಒಂದು ಕಿರುನಾಟಕವನ್ನು 'ಸ್ಪರ್ಧಾವಿಜೇತ'ವನ್ನಾಗಿ ಆಯ್ಕೆ ಮಾಡಲಾಗುವುದು. ಮೂರು ವಿಜೇತ ತಂಡ ತಲಾ 10,000 ರೂ. ಗಳ ಬಹುಮಾನವಿದ್ದು, ಅಂತಿಮ ಆಯ್ಕೆ ತಂಡದಲ್ಲಿರುವ ಎಲ್ಲ ಪಾತ್ರಧಾರಿಗಳಿಗೆ ಪ್ರಮಾಣಪತ್ರಗಳನ್ನು ಮತ್ತು ಆಯ್ಕೆಯಾದ ತಂಡದ ಸಂಗೀತ, ನಿರ್ದೇಶನ, ನಟನೆ, ಸಂಭಾಷಣೆ ಹೀಗೆ ವಿವಿಧ ವಲಯಗಳಲ್ಲಿ ವಿಶೇಷ ಟ್ರೋಫಿ ನೀಡಲಾಗುವುದು. ಯಾವುದೇ ಕಾಲೇಜು/ಸಂಸ್ಥೆ/ಅಮೆಚೂರ್ ನಾಟಕ ಸಮೂಹ, ಕಿರುನಾಟಕಗಳ ಮೂಲ ಲೇಖಕರ ಪರವಾನಿಗೆ ಪತ್ರ ಪಡೆದಿರಬೇಕು. ವೇದಿಕೆ ಸಿದ್ಧಪಡಿಸಲು 20 ನಿಮಿಷ ಹಾಗೂ ಪ್ರದರ್ಶನ ಸಮಯ ಗರಿಷ್ಠ 45 ನಿಮಿಷ ಮಾತ್ರ. ಪ್ರವೇಶ ಶುಲ್ಕವಿಲ್ಲ.ಮುಂಬೈಯಲ್ಲಿ ಪ್ರದರ್ಶನ ಬಯಸುವವರು ಮೊ: 9980933393/9481607542/09892167661 ಮತ್ತು ಕೊಲ್ಕತಾದಲ್ಲಿ ಮೊ: 9892047903 ಸಂಪರ್ಕಿಸಬೇಕು.